**<u>ಅಪರ ಹಿರಿಯ ಸಿವಿಲ್ ನ್ಯಾಯಾಲಯ, ಶ್ರೀರಂಗಪಟ್ಟಣ.</u>**

**<u>ಅಸಲು ದಾವಾ ಸಂಖ್ಯೆ : 80/2023</u>**

**ಡಿ.ಡಬ್ಲ್ಯೂ-8**

| | |
|---|---|
| **ಹೆಸರುಃ** | ದೇವೇಗೌಡ.ಕೆ. |
| **ತಂದೆಯ ಹೆಸರುಃ** | ಲೇಟ್ ಕರಗೇಗೌಡ |
| **ವಯಸ್ಸುಃ** | 43 ವರ್ಷ |
| **ವೃತ್ತಿಃ** | PDO, ಚಿಕ್ಕಅಂಕನಹಳ್ಳಿ ಗ್ರಾಮ ಪಂಚಾಯಿತಿ., |
| **ವಾಸಃ** | ಮೈಸೂರು |

ದಿನಾಂಕ **15.01.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ : ಪ್ರತಿವಾದಿ ಪರ ಶ್ರೀ. ಎನ್.ಕೆ.ಎಸ್. ವಕೀಲರಿಂದ :</u>**

ಈ ಪ್ರಕರಣದಲ್ಲಿ ನ್ಯಾಯಾಲಯದಿಂದ ಸಾಕ್ಷಿ ನುಡಿಯಲು ಸಮನ್ಸ್ ಬಂದ ಪ್ರಯುಕ್ತ ನಾನು ನ್ಯಾಯಾಲಯಕ್ಕೆ ಹಾಜರಾಗಿರುತ್ತೇನೆ. ನಿಡಿ-6 ಕರ ನಿರ್ಧರಣಾ ಪಟ್ಟಿಯಾಗಿರುತ್ತದೆ. ಸದರಿ ದಾಖಲೆಯ ಪ್ರಕಾರ ಖಾತೆ ನಂ.230/202 ಪ್ರತಿವಾದಿಯ ಹೆಸರಿಗೆ ಇರುತ್ತದೆ. ಅದರ ವಿಸ್ತೀರ್ಣ 30 x 48 ಎಂದು ಇದ್ದು, ಅದರ ಚೆಕ್ಕುಬಂದಿ ಪೂರ್ವಕ್ಕೆ-ಚಿಕ್ಕೇಗೌಡರ ಜಮೀನು, ಪಶ್ಚಿಮಕ್ಕೆ-ರಸ್ತೆ, ಉತ್ತರಕ್ಕೆ-ಚಿಕ್ಕತಾಯಮ್ಮ, ದಕ್ಷಿಣಕ್ಕೆ-10 ಅಡಿ ಖಾಲಿ ನಿವೇಶನ ಹಾಗೂ ಪುಟ್ಟಮ್ಮ ಎಂದು ಇರುತ್ತದೆ. ನಿಡಿ-6 ರಂತೆ ಖಾತೆ ಮಾಡಿದಾಗ ಲಕ್ಕೇಗೌಡರವರು ಕಾರ್ಯದರ್ಶಿಯಾಗಿದ್ದರು, ಈಗ PDO ಆಗಿದ್ದಾರೆ. ನಿಡಿ-1 ರಿಂದ 4 ನಮ್ಮ ಪಂಚಾಯಿತಿಯ ಡಿಮ್ಯಾಂಡ್ ರಿಜಿಸ್ಟರ್ ಎಕ್ಸ್ಟ್ರ್ಯಾಕ್ಟ್ ಗಳು ಹಾಗೂ ನಿಡಿ-5 ರಶೀದಿ ನಮ್ಮ ಪಂಚಾಯಿತಿಯ ದಾಖಲೆಗಳು ಆಗಿರುತ್ತದೆ. ಸದರಿ ನಿಡಿ-1 ರಿಂದ 4

ದಾಖಲೆಗಳು ಕೇವಲ ಪಕ್ಷಗಾರರು ಪಂಚಾಯಿತಿಗೆ ಒದಗಿಸುವ ದಾಖಲೆಗಳನ್ನು ಆಧರಿಸಿ ನೀಡಲಾದ ದಾಖಲೆಗಳಾಗಿರುತ್ತವೆ. ಸದರಿ ದಾಖಲಾತಿಗಳು ಮಾಲೀಕತ್ವವನ್ನು ನಿರ್ಧರಿಸುವ ದಾಖಲೆಗಳಾಗಿರುವುದಿಲ್ಲ. ನಿಡಿ-6 ದಾಖಲೆಯು ಸಹ ಹಕ್ಕಿನ ಪತ್ರ ಆಗಿರುವುದಿಲ್ಲ. ಸದರಿ ಪ್ರತಿವಾದಿ ಹೆಸರಿಗೆ ಯಾವ ಆಧಾರದ ಮೇಲೆ ಖಾತೆ ಮಾಡಲಾಗಿದೆ ಎಂದು ಹೇಳಲಾಗುವುದಿಲ್ಲ.

<u>ಪಾಟೀ ಸವಾಲು : ವಾದಿಯ ಪರ ಶ್ರೀ. ಎಸ್.ಕೆ. ವಕೀಲರಿಂದ :</u>

ವಾದಿ ಮತ್ತು ಪ್ರತಿವಾದಿಯ ಬಗ್ಗೆ ಏನು ಕೇಸು ನಡೆಯುತ್ತಿದೆ ಎಂದು ನನಗೆ ಗೊತ್ತಿದೆ. ಚಿಕ್ಕತಾಯಮ್ಮರವರ ಹೆಸರಿಗೆ ಕ್ರಯವಾದ ಆಸ್ತಿಯನ್ನು ಪ್ರತಿವಾದಿ ಖಾತೆ ಮಾಡಿಕೊಂಡಿರುತ್ತಾರೆಂದು ಕೇಸು ಹಾಕಿರುತ್ತಾರೆ. ಯಾವುದೇ ಒಬ್ಬ ವ್ಯಕ್ತಿಯ ಹೆಸರಿಗೆ ಪಂಚಾಯತಿಯಲ್ಲಿ ಖಾತೆ ಮಾಡುವಾಗ ಆ ವ್ಯಕ್ತಿಯ ಹೆಸರಿನಲ್ಲಿರುವ ಹಕ್ಕಿನ ದಾಖಲೆಗಳನ್ನು ಪರಿಶೀಲಿಸಿ ಖಾತೆ ಮಾಡುತ್ತೇವೆಂದರೆ ಸರಿ. ದಾವಾ ಆಸ್ತಿಯು ಕಂದಾಯ ಇಲಾಖೆಯ ಆಸ್ತಿಯೆಂದರೆ ನನಗೆ ಗೊತ್ತಿಲ್ಲ. ಯಾವ ಆಸ್ತಿಗೆ ಯಾರು ಬೇಕಾದರೂ ಸಹ ಕಂದಾಯ ಪಾವತಿಸಬಹುದು, ಅದಕ್ಕೆ ಯಾವುದೇ ನಿರ್ಬಂಧ ಇರುವುದಿಲ್ಲ. ರವಿಕುಮಾರ್ ರವರು ಕಂದಾಯ ಪಾವತಿಸಿದ ಬಗ್ಗೆ ನನಗೆ ಮಾಹಿತಿ ಇಲ್ಲ. ಅಕ್ರಮವಾಗಿ ಖಾತೆ ಮಾಡಿಸಿಕೊಂಡಿರುವ ರವಿಕುಮಾರ್ ರವರಿಗೆ ಸಹಾಯ ಮಾಡುವ ಉದ್ದೇಶಕ್ಕಾಗಿ ಅವರಿಂದ ಕಂದಾಯವನ್ನು ಪಾವತಿಸಿಕೊಂಡಿರುತ್ತೇವೆ ಎಂದರೆ ಸರಿ. ಯಾವುದೇ ವ್ಯಕ್ತಿಯ ಹೆಸರಿಗೆ ಖಾತೆ ಮಾಡುವಾಗ ನಮ್ಮ ಕಛೇರಿಯಲ್ಲಿ ಎಂ.ಆರ್.ನ್ನು ನಿರ್ವಹಣೆ ಮಾಡುತ್ತೇವೆ. ಸದರಿ ಎಂ.ಆರ್.ನ್ನು ಮಾಡುವ ಕಾಲಕ್ಕೆ ಯಾವ

ದಾಖಲೆ ಆಧರಿಸಿ ಖಾತೆ ಬದಲಾವಣೆ ಮಾಡುತ್ತೇವೆಂದು ನಮೂದಿಸುತ್ತೇವೆ ಎಂದರೆ ಸರಿ. ಈ ಕೇಸಿನ ಖಾತಾ ನಂಬರಿಗೆ ಸಂಬಂಧಿಸಿದಂತೆ ನಾನು ಎಂ.ಆರ್.ನ್ನು ಪರಿಶೀಲಿಸಿಲ್ಲ. ಸದರಿ ಎಂ.ಆರ್.ನ್ನು ಅಗತ್ಯವಿದ್ದರೆ ಹಾಜರುಪಡಿಸುತ್ತೇನೆ.

**<u>ಮರು ವಿಚಾರಣೆ : ಇಲ್ಲ.</u>**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ**

**ಅಪರ ಹಿರಿಯ ಸಿಜೆ, ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**